**O. S. 54/2018** **DW - 2**

**ಪ್ರಮಾಣೀಕರಿಸಲಾದ ದಿನಾಂಕಃ 25.02.2026.**

**ಪಾಟೀ ಸವಾಲು ವಾದಿ ಪರ ಶ್ರೀ. ಎಸ್ ವಿ ಎಸ್ ವಕೀಲರಿಂದಃ**

2ನೇ ಪ್ರತಿವಾದಿ ನನ್ನ ಪ್ರಮಾಣ ಪತ್ರವನ್ನು ತಯಾರಿಸಿರುತ್ತಾರೆ, ಎಲ್ಲಿ ಎಂದು ಗೊತ್ತಿಲ್ಲ. ಪ್ರಮಾಣ ಪತ್ರದ ವಿಚಾರಗಳು ಗೊತ್ತು. ಸರ್ವೆ ನಂ. 12/1 ರಲ್ಲಿ ಯಾರ ಯಾರ ಆಸ್ತಿ ಎಂದು ಹೇಳಿರುತ್ತಾರೆ. 2ನೇ ಪ್ರತಿವಾದಿ 1 ನೇ ಪ್ರತಿವಾದಿ ಮೇಲೆ ದಾವೆ ಹಾಕಿದ್ದಾರೆ. 2 ನೇ ಪ್ರತಿವಾದಿ ನನ್ನ cousin, ನಾವು ಚೆನ್ನಾಗಿದ್ದೆವು. ಅವರಿಗೆ ಸಹಾಯ ಮಾಡಲು ಬಂದಿದ್ದೇನೆ ಎಂದರೆ ಸರಿಯಲ್ಲ. ನನಗೆ ಪಕ್ಷಗಾರರು ಯಾರು ಎಂದು ಗೊತ್ತಿಲ್ಲ. ಆದ್ದರಿಂದ ಈ ದಾವೆಯ ಬಗ್ಗೆ ಖುದ್ದು ಮಾಹಿತಿ ಯಾವುದು ಇಲ್ಲ ಎಂದರೆ ಸರಿಯಲ್ಲ. ವಾದಿ ಕೋರಿರುವ ಪರಿಹಾರ ಗೊತ್ತಿಲ್ಲ. ಸರ್ವೆ ನಂ. 12/1 ರಲ್ಲಿ ಅಂದಾಜು 35 ಎಕರೆ ಇರಬಹುದು. ಸರ್ವೆ ನಂ. 12/1 ರಲ್ಲಿ ಎಷ್ಟು ಪೋಡುಗಳಾಗಿದೆ ಮತ್ತು ಅವುಗಳ ವಿಸ್ತೀರ್ಣ ಗೊತ್ತಿಲ್ಲ. ಈ ಜಾಗ ಯಾರಿಗೆ ಯಾರಿಗೆ ಹಂಚಿಕೆ ಆಗಿದೆ ಗೊತ್ತಿಲ್ಲ. ತಿತೀರ ಮುದ್ದಯ್ಯ ವಾದಿಯ vendor ಆಗಿದ್ದು ಆತನ ಬಗ್ಗೆ ಗೊತ್ತಿದೆ. ಮುದ್ದಯ್ಯನಿಗೆ ಆಸ್ತಿ ಹಂಚಿಕೆ ಆದ ಬಗ್ಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳ ನಡುವೆ ಬೇರೊಂದು ದಾವೆ ಇದ್ದು ಅದರ ಆದೇಶ ಗೊತ್ತಿಲ್ಲ. ಮುದ್ದಯ್ಯನವರಿಗೆ ದಾವಾಸ್ತಿ ಹಂಚಿಕೆ ಆಗಿತ್ತು, ಅವರ ಸ್ವಾದೀನದಲ್ಲಿದ್ದರು ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ದಾವಾಸ್ತಿಯನ್ನು ಖರೀದಿಸಿದ ನಂತರ ಖಾತೆಗೆ ಅರ್ಜಿ ಕೊಟ್ಟ ನಂತರ 2 ನೇ ಪ್ರತಿವಾದಿ ಆ ಆಸ್ತಿ ನನ್ನದು ಎಂದು ತಕರಾರು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಕಂದಾಯ ನ್ಯಾಯಾಲಯದ ಆದೇಶ ಏನಾಯಿತು ಗೊತ್ತಿಲ್ಲ. 1ನೇ ಪ್ರತಿವಾದಿಯವರಿಗೆ ಇದ್ದಂತಹ ಆಸ್ತಿಗಳ ಬಗ್ಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಪಾಲುಪರಿಕತ್ ಬಗ್ಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಹೇಳಿಕೊಟ್ಟಂತೆ ಬಂದಿದ್ದು ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ